ಸೀಳು ತುಟಿ–ಬಾಯಿಯ ಚಿಕಿತ್ಸೆಯ ಬಗ್ಗೆ ಯೋಚಿಸುವಷ್ಟು ತಿಳಿವಳಿಕೆ ಇಲ್ಲದ ಶಾರದಮ್ಮ ಮಗುವಿಗೆ ಉಣ್ಣಿಸುವ, ಲಾಲಿಸುವ, ಪಾಲಿಸುವ ತಮ್ಮ ಕೆಲಸಗಳಲ್ಲಿ ಹಗಲು ರಾತ್ರಿಗಳನ್ನು ಕಳೆದಿದ್ದರು. ಈ ಮಗು ತನ್ನದೇ ಒಂದು ಅಂಗ. ಅದನ್ನು ಉಳಿಸಿಕೊಳ್ಳುವುದು ತನ್ನ ಕರ್ತವ್ಯ ಎಂಬ ಒಂದೇ ತಪಸ್ಸಿನಲ್ಲಿ ಪಾಲಿಗೆ ಬಂದದ್ದನ್ನೆಲ್ಲ ವಸುಂಧರೆಯಂತೆ ಕಮಕ್ಕೆನ್ನದೆ ನುಂಗಿ ಘನವಾಗಹತ್ತಿದ್ದರು. 'ಮುಂದೇನು?' ಎನ್ನುವ ಪ್ರಶ್ನೆ ಬಂದಾಗಲೆಲ್ಲ, ಇಂದಿನ ಬಗ್ಗೆ ಮಾತ್ರ ಯೋಚನೆಗಳನ್ನು ತಿರುಗಿಸಿ, 'ಪಡೆದುಕೊಂಡು ಬಂದಂತಾಗಲಿ' ಎಂದು ಅವುಡುಗಚ್ಚಿದ್ದರು. ದೇವರು ಈ ಕಾಯಿಲೆಯನ್ನು ಹೇಗಾದರೂ ನಿವಾರಿಸಲಿ ಎಂದು ಬೇಡುವುದನ್ನು ಅವರು ಬಿಡುವ ವೇಳೆಗೆ ಈಶ್ವರಿ ತನ್ನದೇ ಯುದ್ಧಗಳನ್ನು ಎದುರಿಸುತ್ತಿದ್ದಳು.

ಶಾಲೆಯ ಮಕ್ಕಳು ಆಡಿಕೊಳ್ಳುವ ಭಯ, ಮೂತಿ ತಿರುವಿ ಅವಳ ಸೀಳುತುಟಿಯನ್ನು ಅನುಕರಿಸುವಾಗಿನ ಸಂಕಟ ಇವುಗಳ ಬೇಗುದಿಯಲ್ಲಿ ಅಮ್ಮನ ಮಡಿಲೊಂದೇ ಈಶ್ವರಿಗೆ ಇದ್ದ ಸಾಂತ್ವನವಾಗಿತ್ತು. ಮಾತುಮಾತಿಗೆ ಬದುಕನ್ನು ಹಾಳುಮಾಡಲು ಹುಟ್ಟಿದವಳೆಂಬ ತಾತ್ಸಾರದ ಅಪ್ಪನ ಮಾತುಗಳು ಅವಳ ಪುಟ್ಟ ಹೃದಯವನ್ನು ಚೂರಿಯಂತೆ ಇರಿಯುತ್ತಿದ್ದವು.

ಈ ಸಕಲ ಸಂಕಷ್ಟಗಳ ಉರಿಯ ನಡುವೆ ಈಶ್ವರಿಯ ಮುಗ್ಧತೆಯೆನ್ನುವುದು ಆಗತಾನೇ ಅರಳುತ್ತಿದ್ದ ಹೂವೊಂದು ಭಗಭಗನೆಂದು ಹತ್ತಿ ಉರಿದು ಸುಟ್ಟುಹೋದಂತೆ ಕರಕಲಾಗಿಹೋಗಿತ್ತು. ಸುಟ್ಟ ಭೂಮಿಯ ಬೂದಿಯಲ್ಲಿ ಹುಟ್ಟಿದ ಈ ಜೀವಕ್ಕೊಂದು ಹೃದಯವಿದೆ ಎಂಬುದು ಈಶ್ವರಿಯ ಕುಡುಕ ಅಪ್ಪನಿಗೆ ಅರ್ಥವಾಗುವ ಮುನ್ನವೇ ಅವನು ಹೃದಯಾಘಾತದಿಂದ ತೀರಿಹೋಗಿದ್ದ. ಆಗ ಈಶ್ವರಿ ಒಂಬತ್ತನೆಯ ತರಗತಿಯಲ್ಲಿದ್ದ ಹುಡುಗಿ. ಅವಳ ಪುಟ್ಟ ಹೃದಯದ ಚಡಪಡಿಕೆಗಳು, ಭಯಗಳು, ಭೀಕರ ದುಃಸ್ವಪ್ನಗಳು ಅವಳನ್ನು ಸುಂಟರಗಾಳಿ ಎತ್ತೊಯ್ದ ಚೆಂಡನ್ನಾಗಿ ಮಾಡಿ ಎತ್ತಿ ಎತ್ತಿ ನೆಲಕ್ಕೊಗೆದಿದ್ದವು. ಮಗಳ ಎಲ್ಲ ಸಂಕಟಗಳು ಅರ್ಥವಾದರೂ ಅದನ್ನು ಪದಗಳಲ್ಲಿಟ್ಟು ಹೇಳುವ ಕಲೆ ಶಾರದಮ್ಮನಿಗಿರಲಿಲ್ಲ. ಅಮ್ಮನ ಸಂಕಟಗಳು ಪುಟ್ಟ ಈಶ್ವರಿಗೆ ಪೂರ್ತಿಯಾಗಿ ಅರ್ಥವಾಗಲು ಸಾಧ್ಯವಿರಲಿಲ್ಲ. ಆದರೆ ಅವರಿಬ್ಬರ ನಡುವಿನ ಸಂಕಟಗಳ ಅವ್ಯಕ್ತ ರಾಗವೊಂದು ಅವರನ್ನು ಸ್ನೇಹಿತರಿಗಿಂತ ಮಿಗಿಲಾಗಿ ಬೆಸೆದುಬಿಟ್ಟಿತ್ತು.

ಈಶ್ವರಿಗೆ ಅವಳ ಬಗ್ಗೆ ಯಾರೂ ಮಾತನಾಡುವುದು ಇಷ್ಟವಿರಲಿಲ್ಲ. ಅಸಲು ಅವರಿಬ್ಬರ ದುಃಖಗಳನ್ನು ಅವರಷ್ಟೇ ಅರ್ಥಮಾಡಿಕೊಂಡ ಮತ್ತೊಂದು ಹೃದಯ ಈ ಜಗತ್ತಿನಲ್ಲಿರಲಿಲ್ಲ. ಸೀಳಿದ್ದ ತುಟಿ ಮತ್ತು ಬಾಯ ಅಂಗುಳದ ಕಾರಣ ಈಶ್ವರಿಯ ಉಚ್ಚಾರ ಅಸ್ಪಷ್ಟವಾಗಿದ್ದರೂ ಅದು ಶಾರದಮ್ಮನಿಗೆ ಅರ್ಥವಾಗುತ್ತಿತ್ತು. ಮೌನ ತುಂಬಿದ ಈಶ್ವರಿಯ ನೋಟದ ಎಲ್ಲ ಭಾವನೆಗಳೂ ಶಾರದಮ್ಮನ ಹೃದಯಕ್ಕೆ ವೇದ್ಯವಾಗುತ್ತಿತ್ತು. ಕಬ್ಬಿಣದ ಕಂಬಿಗಳ ಕುರ್ಚಿಗೆ ವೈರಿನ ಹೆಣಿಗೆ, ವೈಯರಿನ ಬುಟ್ಟಿಗಳು, ಹೊಲಿಗೆ, ಸೀರೆಗಳಿಗೆ ಕುಚ್ಚು ಕಟ್ಟಿ, ಫಾಲ್ಸ್ ಹಾಕುವುದು, ಅವರಿವರ ಮನೆಯ ಕೆಲಸ ಹೀಗೆ ತಮ್ಮ ಕೈಯಿಂದ ಸಾಧ್ಯವಾದ್ದನ್ನೆಲ್ಲ ಮಾಡುತ್ತ ಜೀವನ ಸಾಗಿಸುವುದೇ ಅವರಿಗೆ ಅತ್ಯಂತ ಕಷ್ಟದ ಕೆಲಸವಾಗಿತ್ತು. ಪಿ.ಯು.ಸಿ.ಯ ನಂತರ ಓದು ನಿಲ್ಲಿಸಿದ ಈಶ್ವರಿ ಅಮ್ಮನೊಂದಿಗೆ ಕೆಲಸಕ್ಕೆ ನಿಂತಿದ್ದಳು.

ಮಗಳ ತುಟಿ, ಬಾಯಂಗಳವನ್ನು ಸರ್ಜರಿ ಮಾಡಿಸಿ ರಿಪೇರಿ ಮಾಡಿಸಬಹುದೆಂಬ ವಿಚಾರ ಶಾರದಮ್ಮನಿಗೆ ತಿಳಿದದ್ದು ಈಶ್ವರಿಗೆ ಇಪ್ಪತ್ತೆರಡು ವರ್ಷಗಳಾದ ನಂತರ. ಅಲ್ಲಿಯವರಗೆ ಅವೆಲ್ಲ ತಮಗೆ ಎಟುಕದ ಗಗನ ಕುಸುಮೋಪಾದಿಯ ಚಿಕಿತ್ಸೆಯಿರಬಹುದೆಂದೇ ಅವರು ತಿಳಿದಿದ್ದರು. ಅದೊಂದು ದಿನ ಹಳೇ ಪೇಪರ್–ಕಲಾಯ್ ಸಾಬಿಯೊಬ್ಬ ನಗರದ ದೊಡ್ಡಾಸ್ಪತ್ರೆಯಲ್ಲಿ ಅವನ ಸಂಬಂಧಿಕರ ಮಗನೊಬ್ಬನಿಗೆ ಬಿಟ್ಟಿ ಆಪರೇಷನ್ ಆಯ್ತೆಂದೂ, ಯಾವುದೋ ಧರ್ಮಾರ್ಥ ಸಂಸ್ಥೆಯೊಂದು ಕೆಲಕಾಲ ಶಿಬಿರ ನಡೆಸ್ತಾ ಇದೆಯೆಂದೂ ದೇವರೇ ಕಳಿಸಿದಂತೆ ಬಂದು ಹೇಳಿಹೋಗಿದ್ದ.

ಅದನ್ನು ಕೇಳಿದ ದಿನ ಶಾರದಮ್ಮನ ಮನಸ್ಸು ಹಕ್ಕಿಯಂತೆ ಪಟಪಟನೆಂದಿತ್ತು. ವೈದ್ಯಕೀಯ ಕಾಲೇಜೊಂದು ತಮ್ಮ ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಧರ್ಮಾರ್ಥ ನಡೆಸುತ್ತಿದ್ದ ಶಿಬಿರವದು. ಅವರು ಈಶ್ವರಿಯ ಸೀಳುತುಟಿ ಬಾಯಂಗಳವನ್ನು ದುರಸ್ತಿ ಮಾಡಲು ಮುಂದಾದಾಗ ಅಮ್ಮ ಮಗಳಿಬ್ಬರೂ ವಿಧೇಯರಾಗಿ ಆಸ್ಪತ್ರೆಗೆ ಅಲೆದಿದ್ದರು. ಇಂತಹ ತೊಂದರೆಗಳನ್ನು ಹುಟ್ಟಿದ ಒಂದು ವರ್ಷದ ಒಳಗಾಗೇ ರಿಪೇರಿ ಮಾಡಿಸಬೇಕಿತ್ತೆಂದು, ಆಗ ಇನ್ನೂ ಉತ್ತಮ ಫಲಿತಾಂಶ ಸಿಗುತ್ತಿತ್ತೆಂದೂ ಅವರು ಹೇಳಿದಾಗ ಶಾರದಮ್ಮ ದಿಗ್ಮೂಢರಾಗಿ ನಿಂತಿದ್ದರು. ಸಾಧ್ಯವಾದಷ್ಟು ಪ್ರಯತ್ನಿಸಿರೆಂದು ಅಂಗಲಾಚಿದ್ದರು. ಸರ್ಜರಿಯ ಮೊದಲಿಗೆ, ನಂತರ ಅಂತ ನಾನಾ ನಮೂನೆಯ ಫೋಟೋಗಳಿಗೆ ಈಶ್ವರಿ ಮುಖ ನೀಡಿದ್ದಳು. ತನ್ನಂತೆ ಇರುವ ಇತರೆ ಹೆಂಗಸರು, ಗಂಡಸರು ಮತ್ತು ಮಕ್ಕಳನ್ನು ನೋಡಿ ಅವಳಿಗೆ ಆಶ್ಚರ್ಯವಾಗಿತ್ತು. ಇದಕ್ಕೆ ನಿಗದಿತ ಕಾರಣಗಳೇ ಇಲ್ಲ ಅಂತ ವೈದ್ಯರು ಹೇಳಿದಾಗ ಕರ್ಮಗಳ ಸುಳಿಯ ಕಲ್ಪನೆಯಿಂದ ಬಿಡುಗಡೆಯಾಗಿ ಅವರಿಬ್ಬರಿಗೂ ಸಮಾಧಾನವೆನಿಸಿತ್ತು.

ಸರ್ಜರಿಯ ನಂತರ ಈಶ್ವರಿಯ ಸೀಳು ಬಾಯಿ ತಕ್ಕ ಮಟ್ಟಿಗೆ ರಿಪೇರಿಯಾಗಿತ್ತು. ಅದು ಪರಿಪೂರ್ಣವಾದ ಪರಿಹಾರವಲ್ಲದಿದ್ದರೂ ಈಶ್ವರಿಯ ಮೂಗಿನ ಹೊರಳೆ ನೇರವಾಗಿ ಅವಳ ಉಸಿರಾಟ ಸುಧಾರಿಸಿತ್ತು. ಮಾತು–ಕತೆ ಹೆಚ್ಚು ಸ್ಪಷ್ಟವಾಗಿತ್ತು. ಊಟ ನುಂಗುವುದು ಸುಲಭವಾಗಿತ್ತು. ಜೊತೆಗೆ ರೂಪು ಕೂಡ ಅಲ್ಪಸ್ವಲ್ಪ ಭಿನ್ನವಾಗಿದ್ದರೂ ಸಾಮಾನ್ಯದ ಕಡೆಗೆ ತಿರುಗಿತ್ತು. ಅಷ್ಟು ಆಗಿದ್ದೇ ತಡ, ಅಮ್ಮ ಮಗಳಿಬ್ಬರೂ ದೊಡ್ಡ ನಿಟ್ಟುಸಿರಿಟ್ಟು ಸಂತೋಷಿಸಿದ್ದರು.

ಗಾಜಿನ ಪುಟ್ಟ ಮೀನಿನ ಬೋಗುಣಿಯಂತೆ ಪಾರದರ್ಶಕವಾಗಿದ್ದ ಬದುಕಿನ ಕೋಟಲೆಗಳ ನೀರಲ್ಲಿ ಅಸಹಾಯಕ ಮೀನುಗಳಂತೆ ಚಡಪಡಿಸಿ ಈಜುತ್ತಿದ್ದ ಅಮ್ಮ–ಮಗಳ ಬದುಕಿನ ಹೊಯ್ದಾಟಗಳನ್ನು ವಿಕಟ ಮನಸ್ಸಿನಿಂದ ನಿರುಕಿಸುತ್ತಿದ್ದ ಸಮಾಜಕ್ಕೆ ಮಾತ್ರ ಎಂಥದ್ದೋ ಅಸಮಾಧಾನವಾದಂತಿತ್ತು. 'ಮೂತಿ ಸರಿಹೋಯ್ತಲ್ಲ ಇನ್ನು ಯಾವಾಗ ಮದುವೆ?' ಎಂದು ಅವರನ್ನು ಲೇವಡಿ ಮಾಡಿ ಪ್ರಶ್ನೆಗಳನ್ನು ಕೇಳಹತ್ತಿತ್ತು. ವಾಸನೆ ಹತ್ತಿದ ತೋಳಗಳಂಥ ಗಂಡಸರು ಈಶ್ವರಿಯ ಮೈಯನ್ನೆಲ್ಲ ಕಣ್ಣುಗಳಲ್ಲೆ ತಡಕುವುದನ್ನು ಜಾಸ್ತಿಮಾಡಿದಂತಿತ್ತು.

ಆದರೆ ಹುಡುಗರ್ಯಾರೂ ಅವಳ ಕೈ ಹಿಡಿಯಲು ಒಪ್ಪಿರಲಿಲ್ಲ. ಅವಳ ಹೊಲಿದ ಮೇಲ್ತುಟಿಯ ಕಲೆ ಮುಖದಲ್ಲಿ ಇನ್ನೂ ಕಾಣುತ್ತಿತ್ತು. ನಕ್ಕರೆ ಹಲ್ಲುಗಳ ನಡುವೆ ದೊಡ್ಡ ಸಂದಿತ್ತು. ಎಳೆದು ಹೊಲೆದಿದ್ದರಿಂದ ಅವಳ ಅರ್ಧ ಮೂಗು ಸ್ವಲ್ಪ ಬಚ್ಚುಕವೇ ಇತ್ತು. ಆದರೆ ಈಶ್ವರಿ ಮೊದಲಿಗಿಂತ ದುಪ್ಪಟ್ಟು ಸುಂದರಿಯಾಗಿದ್ದಳು ಎನ್ನಬಹುದು. ಅದುವರೆಗೆ ಅದುಮಿಟ್ಟ ಅವರ ಸಂಕಟಗಳು, ನೋವು, ಕೀಳರಿಮೆ ಮತ್ತು ಹಿಂಜರಿತಗಳು ಸರ್ಜರಿಯ ನಂತರ ತೆರೆದುಕೊಂಡ ಆಶಾವಾದದ ಕಿಂಡಿಯಲ್ಲಿ ಜಾದೂ ಮಾಡಿದಂತೆ ಹರಿದು ಮಾಯವಾಗಿಬಿಟ್ಟವು. ಎರಡೂ ಹೆಣ್ಣು ಜೀವಗಳಿಗೆ ಇದ್ದಕ್ಕಿದ್ದಂತೆ ಜೀವಕಳೆ ಮೈಯೇರಿ ಬಂದಿತ್ತು. ಅವರ ನಿಜವಾದ ಉತ್ಸಾಹ, ಹುಮ್ಮಸ್ಸು ಮತ್ತೆ ಅವರ ಕೈ ಹಿಡಿದು ಅವರ ಜೀವನಪಥಕ್ಕೊಂದು ತಿರುವು ನೀಡಿದವು. ಇಬ್ಬರೂ ಸುಂದರಮ್ಮನ ಮಾಂಗಲ್ಯವನ್ನು ಮಾರಿ ದೊಡ್ಡಾಸ್ಪತ್ರೆಯಿದ್ದ ಆ ಊರಿಗೇ ಸ್ಥಳಾಂತರಗೊಂಡುಬಿಟ್ಟರು.

ಈ ಪಟ್ಟಣದಲ್ಲಿ ಈಶ್ವರಿಗೆ ಹೊಸ ಹುರುಪು ಮೈತುಂಬಿಕೊಂಡಿತ್ತು. ಸಣ್ಣ ಪುಟ್ಟ ಕೆಲಸಗಳಿಗೆ ಸೇರಲು ಓಡಾಡಿದಳು. ಮದುವೆಯಾದ ಕಾರಣ ಚರ್ಮ ವೈದ್ಯರೊಬ್ಬರ ಚಿಕಿತ್ಸಾಲಯದ ರೆಸೆಪ್ಷನಿಸ್ಟ್ ಕೆಲಸ ಬಿಟ್ಟಿದ್ದಳು. ಈಶ್ವರಿಗೆ ಅದೇ ಸ್ವಾಗತಕಾರಿಣಿಯ ಕೆಲಸ ಸಿಕ್ಕಿತು. ಈ ಗಜಿಬಿಜಿ ಪಟ್ಟಣದಲ್ಲಿ ಜನರು ತಮ್ಮ ಕೆಲಸವಾದರೆ ಸಾಕು ಎಂಬ ಅವಸರದಲ್ಲಿರುತ್ತಿದ್ದರು. ಈಶ್ವರಿಯ ಮುಖವನ್ನು ನೋಡುತ್ತ ನಿಂತು ಮುಜುಗರ ಹುಟ್ಟಿಸುತ್ತಿರಲಿಲ್ಲ. ಸಿಕ್ಕಾಪಟ್ಟೆ ಪ್ರಶ್ನೆಗಳನ್ನು ಕೇಳುತ್ತಿರಲಿಲ್ಲ. ಈ ಮೊದಲು ಜನರನ್ನು ಎದುರಿಸಲು ಸಂಕೋಚದಿಂದ, ಕೀಳರಿಮೆಯಿಂದ ಮುದ್ದೆಯಾಗುತ್ತಿದ್ದ ಅವಳು ಇದೀಗ ಎಲ್ಲರಿಗಿಂತ ಹೆಚ್ಚು ಆತ್ಮವಿಶ್ವಾಸವನ್ನು ಸೂಸತೊಡಗಿದಳು. ಅವಳ ಬದುಕಿನ ಕಥೆ ಗೊತ್ತಿದ್ದವರು ಇಲ್ಲದವರೆಲ್ಲ ಮೂಗಿನ ಮೇಲೆ ಬೆರಳಿಡುವಂತೆ ಈಶ್ವರಿ ಸಂತೋಷದಿಂದ ಕಷ್ಟಪಟ್ಟು ಕೆಲಸ ಮಾಡುತ್ತಿದ್ದಳು. ಮದುವೆ, ಮಕ್ಕಳು ಸಂಸಾರವಿಲ್ಲದ ಇಂತಹವಳನ್ನು ಆ ಬಗ್ಗೆ ಪ್ರಶ್ನಿಸಿದರೆ ಎಲ್ಲಿ ಕೆಲಸ ಬಿಟ್ಟುಹೋಗುವಳೋ ಎಂಬಂತೆ ಆ ವೈದ್ಯನೂ ನಡೆದುಕೊಂಡ. ಅವಳನ್ನು ವರ್ಷ ಕಳೆದಂತೆ ತನ್ನ ಚಿಕಿತ್ಸಾಲಯದಲ್ಲಿ ಲೇಹ್ಯ, ಔಷಧ, ಗುಳಿಗೆ ತಯಾರಿಸುವ ಎಲ್ಲಕ್ಕೂ ತರಬೇತಿಗೊಳಿಸುತ್ತ ಬಂದ. ಕೊನೆಗೆ ಈಶ್ವರಿ ಆ ವೈದ್ಯನಿಲ್ಲದಿದ್ದರೂ ಒಂದಷ್ಟು ಔಷಧಿಗಳನ್ನು ರೋಗಿಗಳಿಗೆ ತಯಾರಿಸಿಕೊಡುವಷ್ಟು